ನನ್ನ ವೈದ್ಯ ವೃತ್ತಿಯಲ್ಲಿ ಪ್ರತಿ ದಿನ ಭೇಟಿಯಾಗುತ್ತಿದ್ದ ನಾನಾ ಬಗೆಯ ಜನರು ಮತ್ತು ಅವರ ತೊಂದರೆಗಳು ನನ್ನ ದಿನದ ಮುಕ್ಕಾಲು ಭಾಗವನ್ನು ಕಬಳಿಸಿ ಬಿಡುತ್ತಿದ್ದವು. ಒಂದು ರೀತಿಯಲ್ಲಿ ಯಾಂತ್ರಿಕವಾಗಿ ಕೆಲಸ ಮಾಡುವುದಕ್ಕೆ ನಾನು ಒಗ್ಗಿ ಹೋಗಿದ್ದೆ. ಭಾನುವಾರವಷ್ಟೆ ಒಂದಿಷ್ಟು ಬಿಡುವು.

ಕೊಂಕಣ ಸುತ್ತಿ ಮೈಲಾರಕ್ಕೆ ಬಂದೆನಾದರೂ, ಈ ಜಗತ್ತಿನ ವ್ಯಾಪಾರದ ವಿಚಾರಕ್ಕೆ ಹಿಂತಿರುಗುತ್ತೇನೆ. ಎಲ್ಲ ಹಣ್ಣುಗಳು ನನಗೆ ಪ್ರಿಯವೇ. ನಾನು ಚಿಕ್ಕಂದಿನಲ್ಲಿ ಹತ್ತಿ ಆಟವಾಡುತ್ತಿದ್ದ ದಾಳಿಂಬೆ ಮರಗಳ ನೆನಪಿನ ಕಾರಣ ಒಂದಷ್ಟು ವಕ್ರ ದಾಳಿಂಬೆ ಹಣ್ಣುಗಳನ್ನು ಶಾಪಿಂಗ್ ಟ್ರಾಲಿಯಲ್ಲಿ ಹಾಕಿಕೊಳ್ಳಲು ಶುರುಮಾಡಿದೆ. ಅಷ್ಟರಲ್ಲಿ, "ಪ್ರೀತಿ, ಹಾಯ್... ಹೌ ಆರ್ ಯು?'' ಎನ್ನುವ ಗಂಡಸಿನ ದನಿ ನನ್ನ ಹಿಂದಿನಿಂದ ಹೊರಟಿತು. ಬಾಲ್ಯದ ಯಾವುದೋ ಸುಂದರ ನೆನಪುಗಳನ್ನು ಹೊಕ್ಕು ದಾಳಿಂಬೆ ಹಣ್ಣಿಗೆ ಹಾಕಿದ್ದ ಕೈಯನ್ನು ಬೆಚ್ಚುತ್ತ ಹಿಂತೆಗೆದು, ಯಾರೆಂದು ತಿರುಗಿ ನೋಡಿದೆ.

ಆರು ತಿಂಗಳು ನಾಪತ್ತೆಯಾಗಿದ್ದ ಮಿ.ಕೆ.ಯನ್ನು ಅದಾಗಲೇ ನೋಡಿದ್ದು. ದಕ್ಷಿಣ ಅಮೆರಿಕಕ್ಕೆ ಹೋಗಿದ್ದವನು ಮರಳಿ ಬಂದಿದ್ದ. ಮುಂದಿನ ವಾರ ಕೆಲಸಕ್ಕೆ ಹಿಂತಿರುಗುತ್ತಾನಂತೆ. ದಕ್ಷಿಣ ಅಮೆರಿಕದಲ್ಲಿ ಪಡೆದ ಇವನ ಹೊಸ ಸಂಗಾತಿ ಇಂಗ್ಲೆಂಡ್ ನೋಡಲು ಬರುತ್ತಿರುವುದನ್ನು ಮತ್ತು ಇವನ ಜೊತೆ ಆರು ತಿಂಗಳು ಇರಲಿರುವುದನ್ನು ಹೇಳುವಾಗ ಅವನ ಕಣ್ಣುಗಳ ನಕ್ಷತ್ರಗಳು ಮತ್ತೆ ಹೊಳೆದವು.

ವಕ್ರ ದಾಳಿಂಬೆ ಅಂತ ಹೇಳಿದೆನಲ್ಲ?

ಈ ದೇಶದಲ್ಲಿ ಅವರೇ ನಿರ್ಮಿಸಿಕೊಂಡ ಮೌಲ್ಯಗಳಿಗೆ, ಅಂದರೆ ಆಕಾರ, ಗಾತ್ರ, ಉದ್ದ, ದಪ್ಪದ ಅಳತೆಗೆ ಹೊಂದದ ಸೊಟ್ಟ ಹಣ್ಣು, ತರಕಾರಿಗಳನ್ನು ಬೇರೆ ಪ್ಯಾಕ್ ಮಾಡಿ ಅಗ್ಗದ ಬೆಲೆಗೆ ಮಾರಾಟ ಮಾಡುತ್ತಾರೆ. ಆದರೆ ಅವುಗಳ ಗುಣಗಳಲ್ಲಿ ಯಾವ ಲೋಪ ದೋಷಗಳೂ ಇರುವುದಿಲ್ಲ. ಸೃಷ್ಟಿಯಲ್ಲಿ ಎಲ್ಲವೂ ನೇರವಲ್ಲ. ಹಾಗಂತ ಸುಂದರವಾಗಿ ಕಾಣುವ ಎಲ್ಲ ಹಣ್ಣು, ತರಕಾರಿಗಳಲ್ಲಿ ದೋಷಗಳಿರುವುದಿಲ್ಲ ಅಂತೇನೂ ಇಲ್ಲವಲ್ಲ. ಆಯಾ ದೇಶದ ಸಾಮಾಜಿಕ ಮತ್ತು ಮಾರುಕಟ್ಟೆಯ ಮೌಲ್ಯ ತುಲನೆ ಮಾಡುವವರ ಮನಸ್ಸಿನ ದೃಷ್ಟಿಯೇ ಮೆಳ್ಳಗಿದ್ದರೆ ಯಾರದ್ದೇನು ತಪ್ಪು? ಜೀವನದಲ್ಲಿ ತನಗೆ ತಾನೇ ಪರಿಪೂರ್ಣತೆ ಎನ್ನುವುದಿದೆಯೇನು? ಒಂದಷ್ಟು ಆಕಾರಗೆಟ್ಟ ದಾಳಿಂಬೆ, ಕ್ಯಾರೆಟ್ಟುಗಳನ್ನು ಕೊಂಡು ಹೊರಬಂದೆ.

**ಡಾ. ಪ್ರೇಮಲತ ಬಿ.**

ವೃತ್ತಿಯಲ್ಲಿ ದಂತವೈದ್ಯೆ. ಕಳೆದ 17 ವರ್ಷಗಳಿಂದ ಇಂಗ್ಲೆಂಡಿನಲ್ಲಿ ವಾಸ. ಮೂಲತಃ ತುಮಕೂರಿನವರು. ದಿನಪತ್ರಿಕೆ, ವಾರಪತ್ರಿಕೆ ಮತ್ತು ಅಂತರ್ಜಾಲ ತಾಣಗಳಲ್ಲಿ ಲೇಖನ ಮತ್ತು ಕವನಗಳು ಪ್ರಕಟವಾಗಿವೆ. 'ಪ್ರಜಾವಾಣಿ' ಪ್ರೇಮಪತ್ರ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 'ಸುಧಾ' ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಾರೆ. 'ಬಾಯೆಂಬ ಬ್ರಂಹಾಶ್ಮಂಡ' ಎನ್ನುವ ವೃತ್ತಿಪರ ಕಿರು ಪುಸ್ತಕವನ್ನು ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದೆ.